**ಓ.ಎಸ್. ನಂ. 76/2019** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 27.2.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎಸ್.ಎಸ್ ವಕೀಲರಿಂದಃ</u>**

ನಿಪಿ15 ದಾಖಲೆಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರು ನೀಡಲು ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿದಾರರು ಸದರಿ ದಾಖಲೆಯನ್ನು ಪಡೆಯಲು ನಾನು ಗ್ರಾಮ ಪಂಚಾಯಿತಿಗೆ ಹೋದಾಗ ಕಾರ್ಯದರ್ಶಿಯವರು ರಜೆಯಲ್ಲಿದ್ದು ಅಧ್ಯಕ್ಷರು ನೀಡಿರುತ್ತಾರೆ ಎನ್ನುವರು. ನಿಪಿ18ರ ಎರಡನೇ ಪುಟದಲ್ಲಿ ಕ್ರಮ ಸಂಖ್ಯೆ 28ರಲ್ಲಿ ಎನ್.ಕಾಳಿಯಣ್ಣನ್ ಬಿನ್ ನೈನಾಗೌಂಡರ್ ಎಂದು ನಮೂದಾಗಿದ್ದು ಸದರಿ ಹೆಸರಿನ ಮಧ್ಯ ಭಾಗದಲ್ಲಿ ಉಃ ಮುತ್ತುಸ್ವಾಮಿ ಎಂದು ಸೇರ್ಪಡೆ ಮಾಡಿ ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮುತ್ತುಸ್ವಾಮಿ ಎಂಬ ಹೆಸರನ್ನು ನಂತರ ಸೃಷ್ಟಿ ಮಾಡಿದ್ದರಿಂದ ನೈನಾಗೌಂಡರ್ ಹೆಸರಿನ ಮೇಲೆ ಮುತ್ತುಸ್ವಾಮಿ ಎಂಬ ಹೆಸರು ಓವರ್ ಟೈಪ್ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ18ರ ಕ್ರಮ ಸಂಖ್ಯೆ28ರಲ್ಲಿ ಧನಲಕ್ಷ್ಮಿ ಬಿನ್ ಎನ್.ಕಾಳಿಯಣ್ಣನ್ ಎಂದು ಮಾತ್ರ ನಮೂದಾಗಿರುತ್ತದೆ ಎಂದರೆ ಸರಿ. ನಿಪಿ16, 17, 19 ಮತ್ತು 20 ಲ್ಯಾಬ್ ವರದಿಗೂ ಈ ಕೇಸಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿದಾರರು ನನಗೆ ಮಧುಮೇಹ ಇರುವುದನ್ನು ತೋರಿಸಲು ಹಾಜರುಪಡಿಸಿರುತ್ತೇನೆ ಎನ್ನುವರು. ನನಗೆ ಮಧುಮೇಹ ಇರುತ್ತದೆ ಎಂದು ದಾವಪತ್ರದಲ್ಲಿ ನಮೂದಿಸಿರುವುದಿಲ್ಲ. ನಿಪಿ13 ಮತ್ತು 14 ಖಾತೆಗಳನ್ನು ದಿನಾಂಕ 19.2.2015ರಂದು ತೆರೆದಿರುತ್ತೇನೆ ಎಂದರೆ ಸರಿ. ಸದರಿ ಎರಡು ಖಾತೆಗಳನ್ನು ತೆರೆದಿರುವುದನ್ನು ಹೊರತುಪಡಿಸಿ ಬೇರೆ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ಹಣ ಹಾಕುವ ಮತ್ತು ತೆಗೆಯುವ ವ್ಯವಹಾರ ಮಾಡುತ್ತಿದ್ದೆ ಎನ್ನುವರು. ನಿಪಿ13 ಮತ್ತು 14 ದಾಖಲೆಗಳನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ

ಹೆಚ್.ಡಿ.ಕೋಟೆ.